ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಲಯ, ಶ್ರೀರಂಗಪಟ್ಟಣ.

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ : **20/2024**

ಪ್ರಾ.ಸಾ. :-**4**

ಪ್ರಮಾಣೀಕರಿಸಲಾದ ದಿನಾಂಕಃ- **18.08.2026**

ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :

ನನಗೆ ಓದಲು ಬರುತ್ತದೆ. ಅಪಘಾತ ಸ್ಥಳಕ್ಕೆ ಬರಲು ನಿಮ್ಮನ್ನು ಯಾರು ಕರೆದಿರುತ್ತಾರೆ ಎಂದರೆ ಸಾಕ್ಷಿ ಆ ಸಮಯಕ್ಕೆ ನಾನು ಅಲ್ಲಿ ಜ್ಯೂಸ್ ಕುಡಿಯಲು ಹೋಗಿದ್ದೆ, ಆಗ ಪೊಲೀಸರು ಕರೆದಿರುತ್ತಾರೆ ಎನ್ನುತ್ತಾರೆ. ಮಹಜರ್ ಮಾಡಲು ಆ ದಿನ ನಾನು ಹೋಗಿದ್ದೆ, ನ್ಯಾಯಾಲಯಕ್ಕೆ ಬರಲು ಪೊಲೀಸರು ನನಗೆ ನೋಟೀಸ್ ನೀಡಿರುತ್ತಾರೆ. ಮಹಜರನ್ನು ಮಧ್ಯಾಹ್ನ ಮಾಡಿರುತ್ತಾರೆ, 1.00 ಗಂಟೆ ಅಥವಾ 4 ಗಂಟೆಯಾಗಿತ್ತೋ ಗೊತ್ತಿಲ್ಲ. ಮಹಜರನ್ನು ಪೊಲೀಸರು ಅಪಘಾತ ಸ್ಥಳದಲ್ಲಿ ಮಾಡಿರುತ್ತಾರೆ. ಅಪಘಾತ ಸ್ಥಳವನ್ನು ಯಾರು ತೋರಿಸಿರುತ್ತಾರೆ ಎಂದರೆ ಸಾಕ್ಷಿ ಅಲ್ಲಿ ಸಾಕಷ್ಟು ಜನರು ಸೇರಿಕೊಂಡು ಮಾತನಾಡಿಕೊಳ್ಳುತ್ತಿದ್ದರು ಎನ್ನುತ್ತಾರೆ. ಹಿಂದಿನ ದಿನ ಅಪಘಾತವಾಗಿ ಇಬ್ಬರು ಮೃತಪಟ್ಟರು ಎಂದು ನನಗೆ ಹೇಳಿದರು. ನಾನು ಆ ದಿನ ನನ್ನ ವಾಹನದಲ್ಲಿ ಆ ರಸ್ತೆಯಲ್ಲಿ ಹೋಗುತ್ತಿದ್ದೆ. ಪೊಲೀಸರು ಸಾಕ್ಷಿಯಾಗಲು ಹೇಳಿದ್ದು, ನಾನು ಸಾಕ್ಷಿಯಾಗಿರುತ್ತೇನೆ ಎನ್ನುತ್ತಾರೆ. ಮಹಜರ್ ಮಾಡಿದ ಪೊಲೀಸ್ ಸಿಬ್ಬಂದಿಯ ಹೆಸರು ನನಗೆ ಗೊತ್ತಿಲ್ಲ. ಮಹಜರ್ ಬರೆದ ಪೊಲೀಸ್ ಸಿಬ್ಬಂದಿಯ ಹೆಸರು ನನಗೆ ಗೊತ್ತಿಲ್ಲ.

ಅಪಘಾತ ಸ್ಥಳವು ಪಾಲಹಳ್ಳಿಯಿಂದ ಶ್ರೀರಂಗಪಟ್ಟಣಕ್ಕೆ ಹೋಗುವ ರಸ್ತೆಯಾಗಿದ್ದು, ಅಲ್ಲಿ ಜ್ಯೂಸ್ ಅಂಗಡಿ ಮತ್ತು ಜಮೀನು ಇರುತ್ತದೆ. ಸದರಿ ರಸ್ತೆ ಸುಮಾರು 60 ಅಡಿ ಅಗಲ

ಇರಬಹುದು. ಸದರಿ ರಸ್ತೆಯಲ್ಲಿ ಎದುರು-ಬದರಾಗಿ 2 ವಾಹನಗಳು ಸಂಚಾರ ಮಾಡಬಹುದು ಎಂದರೆ ಸರಿ. ಪೊಲೀಸರು ಬರೆದಿದ್ದನ್ನು ನಾನು ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಚಾ.ಸಾ-16 ನನ್ನ ಸ್ನೇಹಿತರಾದ ಕಾರಣ ಪೊಲೀಸ್ ಠಾಣೆಯಲ್ಲಿ ನಾನು ದಾಖಲೆಗಳಿಗೆ ಸಹಿ ಮಾಡಿರುತ್ತೇನೆ ಎಂದರೆ ಸುಳ್ಳು, ಸಾಕ್ಷಿಯು ಮುಂದುವರೆದು ಚಾ.ಸಾ-16 ರವರು ಪರಿಚಯವಿಲ್ಲ ಎನ್ನುತ್ತಾರೆ. ನನ್ನ ಮುಂದೆ ಯಾವುದೇ ವಾಹನಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಮಾರನೇ ದಿನ ಸ್ಥಳಕ್ಕೆ ಹೋಗಿದ್ದ ಕಾರಣ ವಶಪಡಿಸಿಕೊಂಡಿಲ್ಲ ಎನ್ನುತ್ತಾರೆ. ನಿಮ್ಮ ಜೊತೆ ಮಹಜರಿಗೆ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನಾನೊಬ್ಬನೇ ಸಹಿ ಮಾಡಿರುತ್ತೇನೆ ಎನ್ನುತ್ತಾರೆ. ನನ್ನ ಸಮಕ್ಷಮ ಯಾವುದೇ ಮಹಜರ್ ಗಳನ್ನು ಮಾಡಿಲ್ಲ ಎಂದರೆ ಸುಳ್ಳು. ಸ್ಥಳ ಮತ್ತು ಅಮಾನತ್ತು ಮಹಜರ್ ಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸುಳ್ಳು. ಮೃತರ ಕುಟುಂಬದವರು ನನಗೆ ಪರಿಚಯವಿರುವ ಕಾರಣ ಅವರಿಗೆ ವಿಮೆ ಪರಿಹಾರ ಕೊಡಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ **:** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

ಪ್ರಧಾನ ಹಿರಿಯ ಸಿಜೆ ಮತ್ತು
ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.

**ಸಾಕ್ಷಿದಾರರ ಸಹಿ.**